ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿಆರ್-04/2026 ದಿನಾಂಕ: 18-05-2026

## ಯುಜಿಸಿಇಟಿ-2026

ಯುಜಿಸಿಇಟಿ-2026ರ ಅರ್ಜಿಯಲ್ಲಿ Claimed not verified ಎಂದು Claims Certificate ನಲ್ಲಿ ಮುದ್ರಿತವಾಗಿರುವ ಅಭ್ಯರ್ಥಿಗಳ ಗಮನಕ್ಕೆ

**(ದಿನಾಂಕ 21-05-2026ರೊಳಗೆ ಹತ್ತಿರದ "ಸರ್ಕಾರಿ ಪಿಯು ಕಾಲೇಜಿನಲ್ಲಿ" ಹಾಜರಾಗಿ ಪರಿಶೀಲನೆ ಪೂರ್ಣಗೊಳಿಸಿಕೊಳ್ಳಲು ಸೂಚಿಸಿದೆ.)**

ಸಿಇಟಿ 2026 ಕ್ಕೆ ಆನ್‌ಲೈನ್ ಮೂಲಕ ನೋಂದಣಿ ಮಾಡಿದ ನಂತರ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ದಾಖಲಿಸುವ SATS ಸಂಖ್ಯೆಯ ಮೂಲಕ ವ್ಯಾಸಂಗದ ವಿವರಗಳನ್ನು ಪಡೆದು Claims Certificate ನಲ್ಲಿ "Successfully Verified" ಎಂದು ಮುದ್ರಿತವಾಗಿರುವ ಅಭ್ಯರ್ಥಿಗಳು ಪರಿಶೀಲನೆಗೆ ಹಾಜರಾಗುವ ಅವಶ್ಯಕತೆ ಇಲ್ಲ ಎಂದು ಈಗಾಗಲೇ ಸ್ಪಷ್ಟಪಡಿಸಲಾಗಿದೆ. ಆದರೆ;

ಕರ್ನಾಟಕದಲ್ಲಿ ಒಂದರಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮ ವ್ಯಾಸಂಗ ಮಾಡಿರುವ ಮೀಸಲಾತಿ ಅಥವಾ ಒಂದರಿಂದ ಹತ್ತನೇ ತರಗತಿಯವರೆಗೆ ಗ್ರಾಮೀಣ ಪ್ರದೇಶದಲ್ಲಿ ಓದಿರುವ ಮೀಸಲಾತಿ ಅಥವಾ ಒಂದರಿಂದ ಹನ್ನೆರಡನೇ ತರಗತಿಯವರೆಗೆ ಹತ್ತು ವರ್ಷ ಓದಿ ತುಳು, ತಮಿಳು, ತೆಲುಗು, ಕೊಡವ ಭಾಷಾ ಅಲ್ಪಸಂಖ್ಯಾತ ಮೀಸಲಾತಿ ಅಥವಾ ಧಾರ್ಮಿಕ ಅಲ್ಪಸಂಖ್ಯಾತ (ಮುಸ್ಲಿಂ / ಕ್ರಿಶ್ಚಿಯನ್) ಮೀಸಲಾತಿ ಕ್ಲೇಮ್ ಮಾಡಿದ್ದಲ್ಲಿ; Claimed not verified ಎಂದು Claims Certificate ನಲ್ಲಿ ಮುದ್ರಿತವಾಗಿರುವಂತಹ ಅಭ್ಯರ್ಥಿಗಳು ಅರ್ಜಿದಾರರ ಕಾಲೇಜು ಅಥವಾ ಯಾವುದೇ ಸರ್ಕಾರಿ ಕಾಲೇಜಿನಲ್ಲಿ ಎಲ್ಲಾ ದಾಖಲೆಗಳನ್ನು ಸಲ್ಲಿಸಿ ಪರಿಶೀಲನೆ ಮಾಡಿ ಕೊಳ್ಳಲು ಅನೇಕ ಬಾರಿ ಸೂಚಿಸಲಾಗಿದೆ. ಆದಾಗ್ಯೂ ಇನ್ನೂ ಕೆಲವು ಅಭ್ಯರ್ಥಿಗಳು ಪರಿಶೀಲನೆ ಪೂರ್ಣ ಗೊಳಿಸಿರುವುದಿಲ್ಲ.

ಈ ಮೇಲ್ಕಂಡ ಅಭ್ಯರ್ಥಿಗಳಿಗೆ ಕಟ್ಟ ಕಡೆಯ ಅವಕಾಶವನ್ನು ಈ ಮೂಲಕ ನೀಡಲಾಗುತ್ತಿದ್ದು, ಹತ್ತಿರದ "ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ" ಮಾತ್ರ ಎಲ್ಲಾ ಅಗತ್ಯ ಮೂಲ ದಾಖಲೆಗಳೊಂದಿಗೆ ಪರಿಶೀಲನೆಗೆ ದಿನಾಂಕ 21-05-2026ರೊಳಗೆ ಹಾಜರಾಗಿ ಪರಿಶೀಲನೆ ಪೂರ್ಣಗೊಳಿಸಿಕೊಳ್ಳಲು ಸೂಚಿಸಿದೆ.

ಕಾರ್ಯನಿರ್ವಾಹಕ ನಿರ್ದೇಶಕರು

ಗಮನಿಸಿ: ಒಂದುವೇಳೆ ಅಭ್ಯರ್ಥಿಯು ಕ್ಲೇಮ್ ಮಾಡಿಲ್ಲದಿದ್ದಲ್ಲಿ, ತಿದ್ದುಪಡಿಮಾಡಿಕೊಂಡೂ ಸಹ ಪರಿಶೀಲನೆಗೆ ಹಾಜರಾಗಬಹುದು.

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583 Helpline : 080 - 23 460 460.
e-mail : keauthority-ka@nic.in Website : http://kea.kar.nic.in